ಶ್ರೀ ಬಿ. ಸತ್ಯನಾರಾಯಣ (ಗ್ರಾಮೀಣ ನೀರು ಸರಬರಾಜು, ನೈರ್ಮಲ್ಯ ಮತ್ತು ಗ್ರಾಮೀಣಾಭಿವೃದ್ಧಿ ಇಂಜಿನಿಯರಿಂಗ್ ಸಚಿವರು):

ಅ) ಚಿಕ್ಕಮಗಳೂರು ಜಿಲ್ಲೆಗೆ ಕೇಂದ್ರ ಹಾಗೂ ರಾಜ್ಯ ವಲಯದ ವಿವಿಧ ಗ್ರಾಮೀಣ ಕುಡಿಯುವ ನೀರಿನ ಯೋಜನೆಗಳಡಿ 2003–04ನೇ ಸಾಲಿನಲ್ಲಿ ಒಟ್ಟು ರೂ.943.08 ಲಕ್ಷ ಮತ್ತು 2004–05ನೇ ಸಾಲಿನಲ್ಲಿ ಒಟ್ಟು ರೂ. 735.23 ಲಕ್ಷ ಅನುದಾನ ಬಿಡುಗಡೆಯಾಗಿರುತ್ತದೆ.

ಆ) 2004–05ನೇ ಸಾಲಿನಲ್ಲಿ ಕುಡಿಯುವ ನೀರಿಗಾಗಿ ರಾಜ್ಯವಲಯ ಅನುದಾನದ ಯೋಜನೇತರ ಬಾಬ್ತಿನಲ್ಲಿ ಚಿಕ್ಕಮಗಳೂರು ಜಿಲ್ಲೆಗೆ ಬಿಡುಗಡೆಯಾದ ಒಟ್ಟು ಹಣ ರೂ.1.50 ಲಕ್ಷಗಳು.

ಇ) 2003–04ನೇ ಸಾಲಿನಲ್ಲಿ 3054 ರಸ್ತೆ ಕಾಮಗಾರಿಗಳಿಗೆ ಯೋಜನೇತರ ಲೆಕ್ಕ ಶೀರ್ಷಿಕೆಯಡಿ ರೂ.110.04 ಲಕ್ಷ ಅನುದಾನ ಬಿಡುಗಡೆ ಮಾಡಲಾಗಿದೆ.

2509(2779) ಶ್ರೀ ಕೃಷ್ಣಮೂರ್ತಿ ಕೆ.ಎಂ. (ಕಡೂರು):–ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಂಧ್ರಪ್ರದೇಶ ರಾಜ್ಯದಲ್ಲಿ ನೇಮಕ ಮಾಡುವಂತೆ ಬಿ.ಇಡಿ. ಪದವೀಧರರನ್ನು ಪ್ರಾಥಮಿಕ ಶಾಲೆಗಳಲ್ಲಿ ನೇಮಕ ಮಾಡಿಕೊಳ್ಳುವುದರಿಂದ ಶಿಕ್ಷಣದ ಗುಣಮಟ್ಟ ಹೆಚ್ಚಿಸಲು ಸಾಧ್ಯವೇ;

ಆ) ಕಳೆದ 3 ವರ್ಷಗಳಿಂದ ರಾಜ್ಯದಲ್ಲಿರುವ ಅನುದಾನಿತ ಶಾಲೆಗಳ ಸಂಖ್ಯೆ ಎಷ್ಟು; ಜಿಲ್ಲಾವಾರು ಮಾಹಿತಿ ನೀಡುವುದು;

ಇ) ಖಾಸಗಿ ಶಾಲೆಗಳನ್ನು ಅನುದಾನಕ್ಕೆ ಒಳಪಡಿಸಲು ಯಾವ ಮಾನದಂಡಗಳನ್ನು ಉಪಯೋಗಿಸಲಾಗುತ್ತಿದೆ; ಸವಿಸ್ತಾರವಾದ ಮಾಹಿತಿಯನ್ನು ನೀಡುವುದು;

ಈ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರು ನಡೆಸುತ್ತಿರುವ ಶಾಲೆಗಳಿಗೆ ಸರ್ಕಾರ ಅನುದಾನ ನೀಡಲು ಕೈಗೊಂಡ ಕ್ರಮಗಳೇನು? ವಿವರ ನೀಡುವುದು?

ಶ್ರೀ ಆರ್. ರಾಮಲಿಂಗಾರೆಡ್ಡಿ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):

ಅ) ಖಾಸಗಿ ಅನುದಾನಿತ ಪ್ರಾಥಮಿಕ ಶಾಲೆಗಳಲ್ಲಿ ಬಿ.ಇಡಿ. ಪದವೀಧರರನ್ನು ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗೆ ನೇಮಕ ಮಾಡಿಕೊಳ್ಳಲು ಪ್ರಸ್ತುತ ಜಾರಿಯಲ್ಲಿರುವ ಶಿಕ್ಷಣ ಕಾಯ್ದೆಯ ಅನುಸಾರ ಆಸ್ಪದವಿರುವುದಿಲ್ಲ.

ಆ) 1. ಖಾಸಗಿ ಅನುದಾನಿತ, ಪ್ರಾಥಮಿಕ ಶಾಲೆಗಳ ಸಂಖ್ಯೆ– 2571 (ಜಿಲ್ಲಾವಾರು ಪಟ್ಟಿ ಲಗತ್ತಿಸಿದೆ)

2. ಖಾಸಗಿ ಅನುದಾನಿತ, ಪ್ರೌಢಶಾಲೆಗಳ ಸಂಖ್ಯೆ– 2704 (ಜಿಲ್ಲಾವಾರು ಪಟ್ಟಿ ಲಗತ್ತಿಸಿದೆ).

ಇಈ) ಪ್ರಸ್ತುತ ಸರ್ಕಾರದ ದಿನಾಂಕ: 13.09.2002ರ ಆದೇಶ ಸಂಖ್ಯೆ ಇಡಿ 65 ವಿವಿಧ 97 ರನ್ವಯ ದಿನಾಂಕ: 01.06.87ರಿಂದ ದಿನಾಂಕ: 31.03.92ರ ಅವಧಿಯಲ್ಲಿ ಪ್ರಾರಂಭಿಸಲಾದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಆಡಳಿತ ಮಂಡಳಿಗಳು ಪ್ರಾರಂಭಿಸಿ ಸತತವಾಗಿ ನಡೆಸುತ್ತಿರುವ ಶಾಲೆಗಳನ್ನು ಮಾತ್ರ ಅನುದಾನಕ್ಕೆ ಒಳಪಡಿಸಲು ಅವಕಾಶ ಕಲ್ಪಿಸಲಾಗಿದೆ. ಉಳಿದಂತೆ 01.06.87ರ ನಂತರ ಪ್ರಾರಂಭವಾದ ಎಲ್ಲಾ ಖಾಸಗಿ ಶಾಲೆಗಳನ್ನು ಶಾಶ್ವತ ಅನುದಾನರಹಿತ ಶಾಲೆಗಳೆಂದು ಪರಿಗಣಿಸಲಾಗಿದೆ.

ರಾಜ್ಯದಲ್ಲಿನ ಅನುದಾನಿತ ಪ್ರೌಢಶಾಲೆಗಳ ಬಗ್ಗೆ ಮಾಹಿತಿ

1.	ಬೆಂಗಳೂರು ಉತ್ತರ	244
2.	ಬೆಂಗಳೂರು ದಕ್ಷಿಣ	89
3.	ಬೆಂಗಳೂರು ಗ್ರಾಮಾಂತರ	
4.	ಕೋಲಾರ	61
5.	ಕೋಲಾರ ಉತ್ತರ	
6.	ತುಮಕೂರು	258
7.	ತುಮಕೂರು ಉತ್ತರ	
8.	ಶಿವಮೊಗ್ಗ	101
9.	ಚಿತ್ರದುರ್ಗ	149
10.	ದಾವಣಗೆರೆ	148
11.	ಮೈಸೂರು	88
12.	ಚಾಮರಾಜನಗರ	34
13.	ಮಂಡ್ಯ	69
14.	ಹಾಸನ	91
15.	ಚಿಕ್ಕಮಗಳೂರು	93
16.	ಕೊಡಗು	46
17.	ದಕ್ಷಿಣ ಕನ್ನಡ	104
18.	ಉಡುಪಿ	64
19.	ಬೆಳಗಾಂ	271
20.	ಬೆಳಗಾಂ ಉತ್ತರ	
21.	ಬಿಜಾಪುರ	134
22.	ಬಾಗಲಕೋಟೆ	79

23.	ಧಾರವಾಡ	93
24.	ಗದಗ್	70
25.	ಹಾವೇರಿ	100
26.	ಉತ್ತರ ಕನ್ನಡ	125
27.	ಗುಲ್ಬರ್ಗಾ	24
28.	ಗುಲ್ಬರ್ಗಾ ಉತ್ತರ	
29.	ಬಳ್ಳಾರಿ	62
30.	ರಾಯಚೂರು	20
31.	ಕೊಪ್ಪಳ	22
32.	ಬೀದರ್	65
	ಒಟ್ಟು	**2704**

ರಾಜ್ಯದಲ್ಲಿನ ಅನುದಾನಿತ ಪ್ರಾಥಮಿಕ ಶಾಲೆಗಳ ಬಗ್ಗೆ ಮಾಹಿತಿ

ಕ್ರ.ಸಂ.	ಜಿಲ್ಲೆಯ ಹೆಸರು	ಒಟ್ಟು
1.	ಬೆಂಗಳೂರು ಉತ್ತರ	622
2.	ಬೆಂಗಳೂರು ದಕ್ಷಿಣ	
3.	ಬೆಂಗಳೂರು ಗ್ರಾಮಾಂತರ	38
4.	ಕೋಲಾರ	102
5.	ಚಿಕ್ಕಬಳ್ಳಾಪುರ	
6.	ತುಮಕೂರು	67
7.	ಮಧುಗಿರಿ	
8.	ಶಿವಮೊಗ್ಗ	62
9.	ಚಿತ್ರದುರ್ಗ	80
10.	ದಾವಣಗೆರೆ	103
11.	ಮೈಸೂರು	99
12.	ಚಾಮರಾಜನಗರ	48
13.	ಮಂಡ್ಯ	35
14.	ಹಾಸನ	44
15.	ಚಿಕ್ಕಮಗಳೂರು	28
16.	ಕೊಡಗು	11

17.	ದಕ್ಷಿಣ ಕನ್ನಡ	242
18.	ಉಡುಪಿ	231
19.	ಬೆಳಗಾಂ	83
20.	ಚಿಕ್ಕೋಡಿ	
21.	ಬಿಜಾಪುರ	117
22.	ಬಾಗಲಕೋಟೆ	40
23.	ಧಾರವಾಡ	23
24.	ಗದಗ್	26
25.	ಹಾವೇರಿ	24
26.	ಉತ್ತರ ಕನ್ನಡ	40
27.	ಗುಲ್ಬರ್ಗಾ	136
28.	ಯಾದಗಿರಿ	
29.	ಬಳ್ಳಾರಿ	65
30.	ರಾಯಚೂರು	30
31.	ಕೊಪ್ಪಳ	12
32.	ಬೀದರ್	163
	ಒಟ್ಟು	**2571**

2510(2036) ಶ್ರೀ ಕೃಷ್ಣಪ್ಪ ಎಂ.ಟಿ. (ತುರುವೇಕೆರೆ):–ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೊರಾರ್ಜಿ ದೇಸಾಯಿ/ ನವೋದಯ/ ಏಕಲವ್ಯ ಮತ್ತು ಮುಸ್ಲಿಂ ವಸತಿ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಾಚಾರ್ಯರು ಸೇರಿದಂತೆ ಶಿಕ್ಷಕರ ಒಟ್ಟು ಸಂಖ್ಯೆ ಎಷ್ಟು; ಶಾಲೆವಾರು ವಿವರ ನೀಡುವುದು;

ಆ) ಅವರಿಗೆ ನೀಡಲಾಗುತ್ತಿರುವ ವೇತನ ಮತ್ತು ಭತ್ಯೆ ಮುಂತಾದ ಸೌಲಭ್ಯಗಳೇನು;

ಇ) ಇವರುಗಳ ಸೇವಾ ಅವಧಿ ಯಾವಾಗ ಮುಗಿಯಲಿದೆ;

ಈ) ಮುಗಿಯಲಿರುವ ಇವರ ಸೇವಾ ಅವಧಿಯನ್ನು ಮುಂದುವರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ವೈ. ನಾಗಪ್ಪ (ಸಮಾಜ ಕಲ್ಯಾಣ ಸಚಿವರು):

ಅ) ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು ನಿರ್ವಹಿಸುತ್ತಿರುವ ಮೊರಾರ್ಜಿ ದೇಸಾಯಿ/ ನವೋದಯ ಮಾದರಿ/ ಏಕಲವ್ಯ ಹಾಗೂ ಮುಸ್ಲಿಂ ವಸತಿ ಶಾಲೆಗಳಲ್ಲಿ ಕರ್ತವ್ಯ